# ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ-586105

## KARANATAKA STATE AKKAMAHADEVI WOMEN UNIVERSITY, VIJAYAPURA-586105

ಕುಲಸಚಿವರು(ಮೌಲ್ಯಮಾಪನ)
ಜ್ಞಾನಶಕ್ತಿ ಆವರಣ ತೊರವಿ
ದೂರವಾಣಿ: 08352-229123

Email:exam@kswu.ac.in

Registrar (Evaluation)
Jnanashakti Campus Torvi
Web Site:www.kswu.ac.in


ಕ್ರ.ಸಂಖ್ಯೆ: ಕರಾಅಮವಿವಿ/ಸುವರ್ಣಾವಕಾಶ/ಪರೀಕ್ಷಾ/2025-26/2005

ದಿನಾಂಕ: 04 -02-2026

## ಸುವರ್ಣಾವಕಾಶ (Golden Chance) ಪರೀಕ್ಷೆಯ ಅಧಿಸೂಚನೆ

ವಿಷಯ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಪದವಿ ಪೂರ್ಣಗೊಳಿಸಲು ಸುವರ್ಣಾವಕಾಶ (Golden Chance) ಪರೀಕ್ಷೆಯ ಕುರಿತು.

ಉಲ್ಲೇಖ:
1. ದಿನಾಂಕ: 19.11.2025ರ 92ನೆಯ ವಿದ್ಯಾವಿಷಯಕ ಪರಿಷತ್ ಸಭೆಯ (Table Agenda-1) ನಡಾವಳಿ
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 04 -02-2026

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ ವಿವಿಧ ಸ್ನಾತಕ (ಬಿ.ಎ, ಬಿ.ಕಾಂ, ಬಿ.ಎಸ್ಸಿ, ಬಿ.ಬಿ.ಎ, ಬಿ.ಸಿ.ಎ. ಬಿಎಸ್‌ಡಬ್ಲ್ಯೂ, ಬಿ.ಎಡ್, ಬಿ.ಪಿ.ಎಡ್) ಸ್ನಾತಕೋತ್ತರ (ಎಂ.ಎ, ಎಂ.ಎಸ್ಸಿ, ಎಂ.ಕಾಂ. ಎಂ.ಎಡ್, ಎಂ.ಪಿ.ಎಡ್ ಎಂ.ಎಸ್.ಡಬ್ಲ್ಯೂ, ಎಂ.ಬಿ.ಎ) ಹಾಗೂ ಡಿಪ್ಲೋಮಾ ಕೋರ್ಸಗಳಿಗೆ ಪ್ರವೇಶ ಪಡೆದು ತಮ್ಮ ಪದವಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿದೆ ಪದವಿ ಪಡೆಯಲು ವಂಚಿತರಾದ ವಿದ್ಯಾರ್ಥಿನಿಯರಿಗೆ ವಿಶ್ವವಿದ್ಯಾನಿಲಯವು ಸುವರ್ಣಾವಕಾಶ (Golden Chance) ಪರೀಕ್ಷೆಯನ್ನು ಕಲ್ಪಿಸುತ್ತಿದೆ. ಆಯಾ ಅವಧಿಗೆ ಸಂಬಂಧಿಸಿದ ಪಠ್ಯಕ್ರಮದ ಪ್ರಕಾರ ವಿವಿಧ ಸೆಮಿಸ್ಟರ್ ಪರೀಕ್ಷೆಗಳನ್ನು ಮುಂಬರುವ ದಿನಗಳಲ್ಲಿ ನಡೆಸಲು ತೀರ್ಮಾನಿಸಿದೆ. ಈ ಪರೀಕ್ಷೆಗೆ ಅರ್ಹರಾದ ವಿದ್ಯಾರ್ಥಿನಿಯರು ಸೂಕ್ತ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಈ ಕೆಳಗಿನಂತೆ ದಿನಾಂಕಗಳನ್ನು ನಿಗದಿಪಡಿಸಿದೆ.

| ಅರ್ಜಿ ಸಲ್ಲಿಸಲು ಹಾಗೂ ಪರೀಕ್ಷಾ ಶುಲ್ಕ ಪಾವತಿಸಲು ನಿಗದಿಪಡಿಸಿದ ದಿನಾಂಕಗಳು | | | ಪ್ರತಿ ವಿಷಯಕ್ಕೆ/ ಪೇಪರಗೆ ಪರೀಕ್ಷಾ ಶುಲ್ಕ |
|---|---|---|---|
| 1 | ದಂಡ ರಹಿತವಾಗಿ | 15-02-2026 ರಿಂದ 30.04.2026 ರವರೆಗೆ | ರೂ.1000/- |
| 2 | ದಂಡ ಸಹಿತವಾಗಿ | 01.05.2026 ರಿಂದ 31.05.2026 ರವರೆಗೆ | ರೂ. 1000/- +1500/- |

### ಎಲ್ಲಾ ಮಹಾವಿದ್ಯಾಲಯಗಳ ಪ್ರಾಂಶುಪಾಲರು/ವಿಭಾಗಗಳ ಮುಖ್ಯಸ್ಥರು/ಪರೀಕ್ಷಾರ್ಥಿಗಳಿಗೆ ಸೂಚನೆಗಳು

1. ಪರೀಕ್ಷೆ ಬರೆಯುವ ವಿದ್ಯಾರ್ಥಿನಿಯರು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು StudentPortal.universitysolutions.in ನಲ್ಲಿ ಲಾಗಿನ ಆಗಿ ನೋಂದಣಿ ಸಂಖ್ಯೆ ನಮೂದಿಸಿ ಪರೀಕ್ಷೆ ತೆಗೆದುಕೊಳ್ಳುವ ಸೆಮಿಸ್ಟರ್‌ವಾರು/ವಿಷಯವಾರು ಗುರುತು ಮಾಡಿ ಶುಲ್ಕದ ವಿವರಗಳುಳ್ಳ ಅರ್ಜಿ ಮುದ್ರಿಸಿ ಶುಲ್ಕ ಭರಿಸಿದ ನಂತರ ಪ್ರತಿಯನ್ನು ತಕ್ಷಣ ಸಂಬಂಧಪಟ್ಟ ವಿಭಾಗ ಮುಖ್ಯಸ್ಥರಿಗೆ/ ಮಹಾವಿದ್ಯಾಲಯದ ಪ್ರಾಂಶುಪಾಲರಿಗೆ ಸಲ್ಲಿಸಬೇಕು.
2. ಮುಖ್ಯಸ್ಥರು / ಪ್ರಾಂಶುಪಾಲರು ಸುವರ್ಣಾವಕಾಶ (Golden Chance) ಪರೀಕ್ಷೆಗೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿನಿಯರ ಸಂಪೂರ್ಣ ಮಾಹಿತಿಯನ್ನು ಕ್ರೂಢಿಕರಿಸಿ ದಿನಾಂಕ: 06.06.2026ರ ಒಳಗೆ ಈ ಕಛೇರಿಗೆ ತಲುಪುವಂತೆ ಕ್ರಮವಹಿಸಬೇಕು.
3. ಈ ಪರೀಕ್ಷೆಯ ಅರ್ಜಿಯನ್ನು ವಿದ್ಯಾರ್ಥಿನಿಯರು ನೇರವಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತಿಲ್ಲ.
4. ಈ ಪರೀಕ್ಷೆಯ ಶುಲ್ಕದಲ್ಲಿ ಯಾವ ವರ್ಗಕ್ಕೂ ವಿನಾಯಿತಿ ಇರುವುದಿಲ್ಲ.
5. ಸುವರ್ಣಾವಕಾಶ (Golden Chance) ಪರೀಕ್ಷಾ ಕೇಂದ್ರವು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ಜ್ಞಾನಶಕ್ತಿ ಆವರಣ, ವಿಜಯಪುರ ಮಾತ್ರ ಆಗಿರುತ್ತದೆ.
6. ಪರೀಕ್ಷೆಗೆ ಸಂಬಂಧಿಸಿದ ಪಠ್ಯಕ್ರಮ ಹಾಗೂ ಈ ಕುರಿತಂತೆ ಹೆಚ್ಚಿನ ಮಾಹಿತಿ/ನಿಯಮಗಳಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.kswu.ac.in ನ್ನು ಸಂಪರ್ಕಿಸಲು ತಿಳಿಸಿದೆ.

ಕುಲಸಚಿವರು (ಮೌಲ್ಯಮಾಪನ)
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,
ವಿಜಯಪುರ.

Registrar (Evaluation)
Karnataka State Akkamahadevi
Women's University
Vijayapura

ಗೆ,

1. ಎಲ್ಲಾ ವಿಭಾಗಗಳ ಮುಖ್ಯಸ್ಥರು/ಸಂಯೋಜಕರು ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕರಾಅಮವಿವಿ, ವಿಜಯಪುರ
2. ಎಲ್ಲಾ ಸಂಯೋಜಿತ ಮಹಿಳಾ ಮಹಾವಿದ್ಯಾಲಯಗಳ ಪ್ರಾಂಶುಪಾಲರು, ಇವರಿಗೆ ಮಾಹಿತಿ ಹಾಗೂ ಸೂಕ್ತಕ್ರಮಕ್ಕಾಗಿ.
3. ಆರ್ಥಿಕ ಅಧಿಕಾರಿಗಳು, ಕರಾಅಮವಿವಿ, ವಿಜಯಪುರ ಇವರಿಗೆ ಮಾಹಿತಿಗಾಗಿ
4. ಸಹಾಯಕ ಕುಲಸಚಿವರು-ಮಾನ್ಯ ಕುಲಪತಿಗಳ ಕಾರ್ಯಾಲಯ, ಕರಾಅಮವಿವಿ, ವಿಜಯಪುರ ಇವರಿಗೆ ಮಾಹಿತಿಗಾಗಿ.